# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 002

ದೂರವಾಣಿ ಸಂಖ್ಯೆ: 08192-208029


ಸಂಖ್ಯೆ: ದಾವಿವಿ/ಶೈ/ಸುತ್ತೋಲೆ/155/2017-18 / 3221 ದಿನಾಂಕ:27-07-2017

## ಅಧಿಸೂಚನೆ

ವಿಷಯ: ಪಿ.ಯು.ಸಿ. ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 2017-18ನೇ ಸಾಲಿನಲ್ಲಿ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:26-07-2017.

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಲಗ್ನಗೊಂಡ ಕಾಲೇಜು ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ:

1) ಪಿ.ಯು.ಸಿ. ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಯಾವುದೇ ದಂಡಶುಲ್ಕವಿಲ್ಲದೆ ದಿನಾಂಕ:05-08-2017 ರೊಳಗೆ ಪ್ರವೇಶಾತಿ ನೀಡಲು ಅನುಮತಿಸಲಾಗಿದೆ.
2) ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಗನುಗುಣವಾಗಿ ದಿನಾಂಕ:29-07-2017 ರವರೆಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಗಳನ್ನು ದಿನಾಂಕ:03-08-2017 ರೊಳಗೆ ಶುಲ್ಕ ಪಾವತಿ ದಾಖಲಾತಿಗಳೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ.
3) ಪಿ.ಯು.ಸಿ. ಪೂರಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ದಿನಾಂಕ:05-08-2017 ರವರೆಗೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ದಿನಾಂಕ:10-08-2017 ರೊಳಗೆ ಪ್ರವೇಶಾತಿ ಶುಲ್ಕ ವಿವರಗಳೊಂದಿಗೆ ಸಲ್ಲಿಸುವುದು.
4) ವಿದ್ಯಾರ್ಥಿಗಳು ಶೇ. 75% ರಷ್ಟು ಕನಿಷ್ಟ ಹಾಜರಾತಿ ಗಳಿಸುವ ಸಂಬಂಧ ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಠ್ಯಕ್ರಮಗಳನ್ನು ಪೂರೈಸಲು ಕ್ರಮಕೈಗೊಳ್ಳುವುದು.
5) ಬೇರೆ ಕಾಲೇಜುಗಳಿಂದ ವರ್ಗಾವಣೆ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಅನುಮತಿ ಪತ್ರ ಪಡೆದಿರುವ ಪತ್ರದ ಪ್ರತಿಯನ್ನು ಸಹ ಪಟ್ಟಿಗೆ ಲಗತ್ತಿಸುವುದು.

ಆದೇಶಾನುಸಾರ

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002.

ಇವರಿಗೆ:-

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಪ್ರತಿ:

1) ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವರು (ಪರೀಕ್ಷಾಂಗ), ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2) ಕಛೇರಿ ಪ್ರತಿ.

P T O Sul 9